ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1310
ಸದಸ್ಯರ ಹೆಸರು	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	24-12-2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರೈತ ಉತ್ಪಾದನಾ ಸಂಸ್ಥೆಗಳ ರಚನೆಗೆ ಸರ್ಕಾರದಿಂದ ಹೊರಡಿಸಲಾದ ಮಾರ್ಗಸೂಚಿಗಳು ಯಾವುವು; ಈ ರೈತ ಉತ್ಪಾದನಾ ಸಂಸ್ಥೆಗಳಿಗೆ ಸರ್ಕಾರದಿಂದ ದೊರಕುವ ಸವಲತ್ತುಗಳು ಯಾವುವು; ರೈತ ಉತ್ಪಾದನಾ ಸಂಸ್ಥೆಗಳನ್ನು ಸಶಕ್ತಗೊಳಿಸಲು ಇಲಾಖೆಯ ಕಾರ್ಯಕ್ರಮಗಳು ಯಾವುವು; ರಾಜ್ಯದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ರೈತ ಉತ್ಪಾದನಾ ಸಂಸ್ಥೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)	ರಾಜ್ಯ ಸರ್ಕಾರವು ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ನೀತಿ-2018 ನ್ನು ಜಾರಿಗೆ ತಂದಿರುತ್ತದೆ ಹಾಗೂ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಕೇಂದ್ರ ಸರ್ಕಾರವು 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನಕ್ಕೆ ಅನುಷ್ಠಾನ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳನ್ನು ಸಶಕ್ತಗೊಳಿಸಲು ಇಲಾಖೆಯು ಪ್ರಸ್ತುತ ರಾಜ್ಯ ನೀತಿಯನ್ವಯ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 130 ರೈತ ಉತ್ಪಾದಕರ ಸಂಸ್ಥೆಗಳನ್ನು ಮತ್ತು ಕೇಂದ್ರ ಪುರಸ್ಕೃತ 10,000 ರೈತ ಉತ್ಪಾದಕರ ರಚನೆ ಮತ್ತು ಉತ್ತೇಜನ ಯೋಜನೆಯಡಿ 100 ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಉತ್ತೇಜಿಸಲಾಗುತ್ತಿದೆ. ಮುಂದುವರೆದು, ಸನ್ಮಾನ್ಯ ಮುಖ್ಯಮಂತ್ರಿಯವರು 2021ನೇ ಸಾಲಿನ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ರೈತ/ಮೀನುಗಾರರ/ ನೇಕಾರರನ್ನು ಸಂಘಟಿಸಿ 750 ಅಮೃತ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದಾಗಿ ಘೋಷಿಸಿದ ಹಿನ್ನೆಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ 210 ಹಾಗೂ ರೇಷ್ಮೆ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಕೈಮಗ್ಗ ಹಾಗೂ ಜವಳಿ ಇಲಾಖೆಗಳಿಂದ 540 ಅಮೃತ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಉತ್ತೇಜಿಸಲು ಗುರಿಯನ್ನು ಹೊಂದಲಾಗಿದೆ. ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ರಚಿಸಿ ಉತ್ತೇಜಿಸುತ್ತಿರುವ ಹಾಗೂ ಪ್ರಸ್ತುತ ಅಸ್ತಿತ್ವದಲ್ಲಿರುವ ಒಟ್ಟು 242 ರೈತ ಉತ್ಪಾದಕರ ಸಂಸ್ಥೆಗಳ ಜಿಲ್ಲಾವಾರು ಸಂಖ್ಯೆಯ ವಿವರವನ್ನು ಅನುಬಂಧದ-1ರಲ್ಲಿ ಒದಗಿಸಿದೆ.

(ಆ)	ಉಡುಪಿ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಲು ಕೃಷಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು ಯಾವ ಯಾವ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ; ಕೃಷಿ ಯಂತ್ರಗಳನ್ನು ಬಳಸಲು ಇಲಾಖೆಯಿಂದ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆಯೇ; (ಕಾರ್ಯಕ್ರಮವಾರು ಮಾಹಿತಿಯನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಲು ಕೃಷಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ, ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ತರಬೇತಿಯನ್ನು ಆಯೋಜಿಸಲಾಗಿರುತ್ತದೆ. 1. ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ರೈತರಿಗೆ ಶೇ.90 ರಷ್ಟು ಗರಿಷ್ಠ ರೂ.1.00 ಲಕ್ಷಕ್ಕೆ ಸಹಾಯಧನವನ್ನು ಮಿತಿಗೊಳಿಸಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ. 2. 45 PTO HP ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ 90 ರ ಗರಿಷ್ಠ ರೂ.3.00 ಲಕ್ಷಗಳ ಸಹಾಯಧನ ಒದಗಿಸಲಾಗುತ್ತಿದೆ. 3. ಕೃಷಿ ಯಂತ್ರೋಪಕರಣಗಳ ಲಭ್ಯತೆಯನ್ನು ಹೆಚ್ಚಿಸಲು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಅಶಕ್ತರಿರುವ ರೈತರಿಗೆ ಕೃಷಿ ಯಂತ್ರೋಪಕರಣಗಳು ಬಾಡಿಗೆ ಆಧಾರದ ಮೇಲೆ ದೊರೆಯುವಂತಾಗಲು ಹೋಬಳಿಗೊಂದರಂತೆ ಶೇ.70 ರ ಸಹಾಯಧನದಡಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. 4. ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಹೆಚ್ಚಿಸಲು ಗ್ರಾಮ ಪಂಚಾಯತಿ / ಗ್ರಾಮ ಮಟ್ಟದಲ್ಲಿ ಸಹಕಾರ ಸಂಘದ ನಿಯಮದಡಿ ನೋಂದಾಯಿತ ಸಂಘ ಸಂಸ್ಥೆಗಳಿಗೆ ಶೇ.80 ರ ಸಹಾಯಧನದಡಿ ಗರಿಷ್ಠ ರೂ.8.00 ಲಕ್ಷಗಳ ಸಹಾಯಧನವನ್ನು ಒದಗಿಸಿ ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಗಳನ್ನು ಸ್ಥಾಪಿಸುವ ಕಾರ್ಯಕ್ರಮ ಜಾರಿಗೆ ತರಲಾಗಿದೆ.
ಇ)	ಕೃಷಿ ಕಾರ್ಮಿಕರ ಕೊರತೆ, ಕಾಡು ಪ್ರಾಣಿ ಹಾವಳಿ, ಪ್ರಾಕೃತಿಕ ವಿಕೋಪ ಹೀಗೆ ಹತ್ತು ಹಲವು ಕಾರಣಗಳಿಂದ ನಿರಂತರ ಸಂಕಷ್ಟವನ್ನು ಅನುಭವಿಸುತ್ತಿರುವ ರೈತರಿಗೆ ಬಿತ್ತನೆಯಿಂದ ಕಟಾವು ತನಕ ಆರ್ಥಿಕ ಭದ್ರತೆಯನ್ನು ಒದಗಿಸಲು ಸರ್ಕಾರದ ಕ್ರಮವೇನು; ಸರ್ಕಾರದ ಸಹಾಯಧನ ಮತ್ತು ಪ್ರೋತ್ಸಾಹಧನ ಕಾರ್ಯಕ್ರಮಗಳ ಹಿಂತೆಗೆತದಿಂದ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿಯಿಂದ ವಿಮುಖರಾಗುವುದನ್ನು ಸರ್ಕಾರವು ಗಮನಿಸಿದೆಯೇ; ಬದಲಿ ಕಾರ್ಯಕ್ರಮಗಳು ಯಾವುವು?	ಕೃಷಿ ಕಾರ್ಮಿಕರ ಕೊರತೆ, ಕಾಡು ಪ್ರಾಣಿ ಹಾವಳಿ ಮತ್ತು ಪ್ರಾಕೃತಿ ವಿಕೋಪ, ಹೀಗೆ ಹತ್ತು ಹಲವು ಕಾರಣಗಳಿಂದ ನಿರಂತರ ಸಂಕಷ್ಟವನ್ನು ಅನುಭವಿಸುತ್ತಿರುವ ರೈತರಿಗೆ ಬಿತ್ತನೆಯಿಂದ ಕಟಾವುತನಕ ಆರ್ಥಿಕ ಭದ್ರತೆಯನ್ನು ಒದಗಿಸಲು ಕೃಷಿ ಇಲಾಖೆಯಿಂದ ನೀಡುತ್ತಿರುವ ಸವಲತ್ತುಗಳ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ. ಕೃಷಿ ಇಲಾಖೆಯಿಂದ ವಿವಿಧ ಸವಲತ್ತುಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆದ್ಯತೆಯ ಮೇರೆಗೆ ಸಹಾಯಧನದಡಿ ನೀಡಲು ಕ್ರಮವಹಿಸಲಾಗಿದೆ.

ಸಂಖ್ಯೆ:AGRI-AML/263/2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

ಅನುಬಂಧ – 1

ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ರಚಿಸಿ ಉತ್ತೇಜಿಸುತ್ತಿರುವ ಹಾಗೂ ಪ್ರಸ್ತುತ ಅಸ್ತಿತ್ವದಲ್ಲಿರುವ ಜಿಲ್ಲಾವಾರು ರೈತ ಉತ್ಪಾದಕರ ಸಂಸ್ಥೆಗಳ ಸಂಖ್ಯೆಯ ವಿವರ.

(LCQ-1310)

ಕ್ರ. ಸಂ.	ಜಿಲ್ಲೆ	ರೈತ ಉತ್ಪಾದಕರ ಸಂಸ್ಥೆಗಳ ಸಂಖ್ಯೆ (ದಿನಾಂಕ: 15.12.2021 ರಂತೆ)
1	ಬಾಗಲಕೋಟೆ	8
2	ಬಳ್ಳಾರಿ	16
3	ಬೆಳಗಾವಿ	12
4	ಬೆಂಗಳೂರು (ಗ್ರಾ)	6
5	ಬೀದರ್	6
6	ಚಾಮರಾಜನಗರ	7
7	ಚಿಕ್ಕಬಳ್ಳಾಪುರ	8
8	ಚಿಕ್ಕಮಗಳೂರು	6
9	ಚಿತ್ರದುರ್ಗ	12
10	ದಕ್ಷಿಣ ಕನ್ನಡ	2
11	ದಾವಣಗೆರೆ	10
12	ಧಾರವಾಡ	9
13	ಗದಗ	10
14	ಹಾಸನ	10
15	ಹಾವೇರಿ	11
16	ಕಲಬುರಗಿ	11
17	ಕೋಲಾರ	8
18	ಕೊಪ್ಪಳ	10
19	ಕೊಡಗು	1
20	ಮಂಡ್ಯ	7
21	ಮೈಸೂರು	8
22	ರಾಯಚೂರು	6
23	ರಾಮನಗರ	7
24	ಶಿವಮೊಗ್ಗ	6
25	ತುಮಕೂರು	12
26	ಉತ್ತರ ಕನ್ನಡ	11
27	ಉಡುಪಿ	4
28	ವಿಜಯಪುರ	9
29	ಯಾದಗಿರಿ	9
	ಒಟ್ಟು	242

ನಿರ್ದೇಶಕರು
ಜಲಾನಯನ ಅಭಿವೃದ್ಧಿ ಇಲಾಖೆ.

ಅನುಬಂಧ-3

LCQ NO : 1166 (1310)					
ಕ್ರಸಂ	ಏರ್ಪಡಿಸಿದ ಕಾರ್ಯಕ್ರಮ (ವಿಷಯ)	ಚಟುವಟಿಕೆ	ಸ್ಥಳ	ದಿನಾಂಕ	ಭಾಗವಹಿಸಿದ ರೈತರ ಸಂಖ್ಯೆ
1	ಯಾಂತ್ರೀಕೃತ ನಾಟಿ ಪದ್ಧತಿ ಹಾಗೂ ಚಾಪೆ ನೇಜಿ ತಯಾರಿ	ತರಬೇತಿ	ಕಾರ್ಕಳ	18.11.2021	30
2	ಯಾಂತ್ರೀಕೃತ ನಾಟಿ ಪದ್ಧತಿ		ಹಕ್ಲಾಡಿ	22.07.2021	30
3	ಯಾಂತ್ರೀಕೃತ ನಾಟಿ ಪದ್ಧತಿ		ಕೆದೂರು	23.07.2021	30
4	ಯಾಂತ್ರೀಕೃತ ನಾಟಿ ಪದ್ಧತಿ		ಸೂರ್ಕುಂದ	23.07.2021	30
5	ಯಾಂತ್ರೀಕೃತ ನಾಟಿ ಪದ್ಧತಿ ಹಾಗೂ ಚಾಪೆ ನೇಜಿ ತಯಾರಿ	ತರಬೇತಿ	ಮಣಿಪುರ	28.07.2021	50
6	ಉದ್ದು ಕೂರಿಗೆ ಬಿತ್ತನೆ	ಪ್ರಾತ್ಯಕ್ಷಿಕೆ ಹಾಗೂ ತರಬೇತಿ	ಕಡೆಕಾರು	11.12.2021	30
7	ಯಾಂತ್ರೀಕೃತ ನಾಟಿ ಪದ್ಧತಿ	ತರಬೇತಿ	ಕಡೆಕಾರು	18.07.2021	30
8	ಯಾಂತ್ರೀಕೃತ ನಾಟಿ ಪದ್ಧತಿ		ಕಡೆಕಾರು	26.06.2021	30
9	ಯಾಂತ್ರೀಕೃತ ನಾಟಿ ಪದ್ಧತಿ		ಗಿಳಿಯಾರು	15.06.2021	30
10	ಯಾಂತ್ರೀಕೃತ ನಾಟಿ ಪದ್ಧತಿ		ಶಿವಳ್ಳಿ	04.07.2021	30
11	ಯಾಂತ್ರೀಕೃತ ನಾಟಿ ಪದ್ಧತಿ		ಚೇರ್ಕಾಡಿ	10.07.2021	30
12	ಬೆಳೆಪದ್ಧತಿ ಆಧಾರಿತ ತರಬೇತಿ -ಯಾಂತ್ರೀಕೃತ ನಾಟಿ ಪದ್ಧತಿ ಮಾಹಿತಿ	NFSM	ಮರ್ಣೆ	28.11.2021	53
13	ಯಾಂತ್ರೀಕೃತ ನಾಟಿ ಪದ್ಧತಿ ತರಬೇತಿ ಕಾರ್ಯಕ್ರಮ	ATMA	ಹೆಜ್ಜ	18.11.2021	30
14	ಯಾಂತ್ರೀಕೃತ ನಾಟಿ ಪದ್ಧತಿ ಕುರಿತು ಮಾಹಿತಿ	ATMA-FFS	ಪಕ್ಕ	11.09.2021	28
15	ಯಾಂತ್ರೀಕೃತ ನಾಟಿ ಪದ್ಧತಿ. ಚಾಪೆ ನೇಜಿ ತಯಾರಿ	ತರಬೇತಿ (CHSC ಸಹಯೋಗ)	ಕಾಳಾವರ	24.10.2021	200
16	ಯಾಂತ್ರೀಕೃತ ನಾಟಿ ಪದ್ಧತಿ.	ತರಬೇತಿ (NRLM ಸಹಯೋಗ)	ಕೆರೆಬೆಟ್ಟು	3.12.2021	48

ಜಂಟಿ ಕೃಷಿ ನಿರ್ದೇಶಕರು
ಉಡುಪಿ ಜಿಲ್ಲೆ, ಉಡುಪಿ